ನನಗಿಲ್ಲ. ಸ್ನೇಹಿತರು ಸಾಮಾನ್ಯವಾಗಿ ಅವರವರಿಗೆ ತೊಂದರೆಯಾದಾಗ ಬಂದು ಹೇಳುತ್ತಾರೆ ನೀವು ಹೇಳಿದ್ದರಲ್ಲ ವಿಶೇಷ ಏನಿಲ್ಲ. ಇದರ ಬಗ್ಗೆ ನಾವು ಬಹಳ ಚಿಂತನೆಯನ್ನು ಮಾಡಿದ್ದೇವೆ, ಅನೇಕ ಸಾರಿ ಮೀಟಿಂಗ್‌ಗಳಿಗೆ ಹೋದಲ್ಲೆಲ್ಲಾ ಅವರು ರೆಪ್ರೆಸೆಂಟೇಷನ್ ಕೊಡುತ್ತಾರೆ. ಅವರ ಸಮಸ್ಯೆಗಳು ಏನು ಎಂದು ಹೇಳಿ ತಿಳಿದು ಕೊಳ್ಳತಕ್ಕಂಥ ಅವಕಾಶ ಅವರು ಕಲ್ಪಿಸಿಕೊಟ್ಟಿರತಕ್ಕಂಥ ಸಂದರ್ಭದಲ್ಲಿ ನಾನು ಪ್ರಯತ್ನ ಪಟ್ಟಿದ್ದೇನೆ. ಹೆಚ್ಚಿಗೆ ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಏನು ಮಾಡಿದ್ದೇವೆ, ಏನು ಮಾಡುತ್ತೇವೆ ಎನ್ನುವ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ ಅಧ್ಯಕ್ಷರೆ, ಈ ಬಗ್ಗೆ ಈಗಾಗಲೇ ಅವರನ್ನೂ ಕರೆಯಿಸಿ, ಸಂಬಂಧಪಟ್ಟಿರತಕ್ಕಂಥ ಅಧಿಕಾರಿಗಳನ್ನು ಕರೆಯಿಸಿ ಅನೇಕಸಾರಿ ನಾವು ಚರ್ಚೆ ಮಾಡಿದ್ದೇವೆ. ಹೆಚ್ಚು ಆರ್ಥಿಕ ಹೊರೆ ಬೀಳುವುದರಿಂದ ಆರ್ಥಿಕ ಇಲಾಖೆ ಹೆಚ್ಚಿನ ಬೇಡಿಕೆಗೆ ಒಪ್ಪಿಕೊಳ್ಳುವುದಿಲ್ಲ. ಹೆಚ್ಚು ಖರ್ಚು ಬೀಳುತ್ತದೆ ಆದ್ದರಿಂದ ಸಾಧ್ಯವಿಲ್ಲ ಎಂದು ಹೇಳಿ ಆರ್ಥಿಕ ಇಲಾಖೆಯವರು ಹೇಳುತ್ತಾ ಇದ್ದು ದರಿಂದ ಇದುವರೆಗೂ ಕಾರ್ಯಗತ ಮಾಡುವುದಕ್ಕೆ ಆಗಿಲ್ಲ. ಆದರೂ ಈ ಅಧಿವೇಶನ ಮುಗಿಯುವುದರೊಳಗೆ ಶಿಕ್ಷಣ ಕ್ಷೇತ್ರವನ್ನು ಪ್ರತಿನಿಧಿಸುತ್ತಿರತಕ್ಕಂಥ ಅವಕಾಶವನ್ನು ನಾನು ಮಾಡಿಕೊಡುತ್ತೇನೆ.

(ಈ) ಪುತ್ತೂರು ತಾಲ್ಲೂಕಿನ ಇಂಡಿಯನ್ ಪ್ಲೈವುಡ್ ಕಂಪನಿ ಮತ್ತು ದಾಂಡೇಲಿಯ ಪ್ಲೈವುಡ್ ಕಂಪನಿಯಲ್ಲಿ ಕುಡಿಯುವ ಕಾರ್ಮಿಕರಿಗೆ ಬೋನಸ್.

ಶ್ರೀ ಎಸ್. ಅಂಗಾರ (ಸುಳ್ಯ) :- ಸನ್ಮಾನ್ಯ ಸಭಾಧ್ಯಕ್ಷರೆ, ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಬಿಳಿಎಲೆ ಗ್ರಾಮದ ನೆಟ್ಟಳದಲ್ಲಿರುವಂಥ ಇಂಡಿಯನ್ ಪ್ಲೈವುಡ್ ಕಂಪನಿ ಮತ್ತು ದಾಂಡೇಲಿಯ ಪ್ಲೈವುಡ್ ಕಂಪನಿಯಲ್ಲಿ ದುಡಿಯುತ್ತಿರುವ ನೂರಾರು ಕಾರ್ಮಿಕರಿಗೆ ಕಳೆದ 4-5 ತಿಂಗಳಿನಿಂದ ಕಾನೂನು ರೀತಿಯ ಯಾವುದೇ ಸಂಬಳ ಪಾವತಿಯಾಗದಿದ್ದು ಎಲ್ಲಾ ಕಾರ್ಮಿಕ ಕುಟುಂಬಗಳಿಗೆ ಸಿಗಬೇಕಾದಂಥ ಬೋನಸ್ ಕೂಡ 4-5 ವರ್ಷಗಳಿಂದ ಸಿಗದೇ ಅತೀವ ತೊಂದರೆ ಯಿಂದ ಬಳಲುತ್ತಿದ್ದು, ಮಕ್ಕಳ ವಿದ್ಯಾಭ್ಯಾಸವೂಕೂಡ ಸ್ಥಗಿತಗೊಂಡಿರುತ್ತದೆ. ಅಲ್ಲದೆ ದಾಂಡೇಲಿಯಲ್ಲಿ ಒಬ್ಬ ಕಾರ್ಮಿಕ ಈಗಾಗಲೇ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದು, ನೆಟ್ಟಳದಲ್ಲೂ ಒಬ್ಬ ಕಾರ್ಮಿಕ ಆತ್ಮಹತ್ಯೆಗೆ ಪ್ರಯತ್ನ ಪಟ್ಟಿರುತ್ತಾನೆ. ಕಾರ್ಮಿಕ ಇಲಾಖೆ ಹಾಗೂ ಸರ್ಕಾರಕ್ಕೆ ಈ ಬಗ್ಗೆ ಬರೆದುಕೊಂಡಿದ್ದರೂ ಸಹಿತ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ತಕ್ಷಣ ಈ ಬಗ್ಗೆ ಗಮನಹರಿಸಿ ಕಾರ್ಮಿಕರ ವೇತನ ಮತ್ತು ಬೋನಸ್ಸನ್ನು ನೀಡುವಂತೆ ಕೂಡಲೇ ಸರ್ಕಾರ ಆದೇಶ ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು) :- ಅಧ್ಯಕ್ಷರೆ, ಇದು ಬಹಳ ಗಂಭೀರವಾದಂಥ ವಿಚಾರ, ಪುತ್ತೂರು ತಾಲ್ಲೂಕಿನಲ್ಲಿ ನಡೆಯುತ್ತಾ ಇರತಕ್ಕಂಥ ಪ್ರೈವೇಟ್ ಫ್ಯಾಕ್ಟರಿಯಲ್ಲಿ ಸುಮಾರು ಜನ ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಾರೆ ಅದು

ಇಂಡಿಯನ್ ಪ್ಲೈವುಡ್ ಫ್ಯಾಕ್ಟರಿ, ಆದೇ ಫ್ಯಾಕ್ಟರಿ ದಾಂಡೇಲಿಯಲ್ಲೂ ಕೂಡ ಇದೆ. ಮೊನ್ನೆ ಪತ್ರಿಕೆಯಲ್ಲಿ ಕ್ಲಿಯರ್ ಆಗಿ ಬಂದಿದೆ. ನಾಲ್ಕು ತಿಂಗಳ ಸಂಬಳವನ್ನೂ ಅಂದರೆ ಏಪ್ರಿಲ್ ತಿಂಗಳಿನಿಂದ ಸಂಬಳವನ್ನು ಕೊಡದ ಕಾರಣ ಸುಮಾರು ನೂರಾರು ಕಾರ್ಮಿಕರು ಅವರ ಮಕ್ಕಳನ್ನು ಶಾಲೆಗೆ ಕಳುಹಿಸಲಿಕ್ಕೆ ಆಗಲಿಲ್ಲ. ಮೊನ್ನೆ ಒಬ್ಬ ದುಡ್ಡು ಇಲ್ಲದೆ ಮನೆಗೆ ಬೇಕಾದಂತಹ ದಿನನಿತ್ಯದ ವಸ್ತುಗಳನ್ನು ತೆಗೆದುಕೊಂಡು ಹೋಗಲು ಆಗದೆ ಆತ್ಮಹತ್ಯೆಗೆ ಪ್ರಯತ್ನ ಮಾಡಿದ್ದಾನೆ. ಇನ್ನೊಂದು ಕಡೆ ನಮ್ಮ ದಾಂಡೇಲಿಯಲ್ಲಿ ಯೂಸೆಫ್ ಸ್ವಾಮಿ ರಾವ್ ಎನ್ನುವವನಿಗೆ 50 ವರ್ಷ ಆಗಿದೆ. ಇವನು ಸಂಬಳ ಸಿಗದೆ ಮನೆಗೆ ಬೇಕಾದಂತಹ ಸಾಮಾನುಗಳನ್ನು ತೆಗೆದುಕೊಂಡು ಹೋಗಲು ಆಗಲಾರದೆ ಆತ್ಮಹತ್ಯೆ ಮಾಡಿಕೊಳ್ಳಲು ಕಾರಣವಾಯಿತು. ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. 3 ನೇ ತಾರೀಖಿಗೆ ಮಂಗಳೂರಿನಲ್ಲಿ ಎ.ಎಲ್.ಸಿ.ಯಲ್ಲಿ ಕನ್ಸಿಲಿಯೇಷನ್ ಕೂಡ ಕರೆದಿದ್ದಾರೆ. ಆದರೆ ಯಾವುದೇ ಪರಿಣಾಮವಾಗಿಲ್ಲ. ಆದುದರಿಂದ ಅವರಿಗೆ ಏನು ಸಂಬಳ ಪಾವತಿಯಾಗಬೇಕು; ಅದನ್ನು ಕೊಡಿಸುವಂತಹ ವ್ಯವಸ್ಥೆಯನ್ನು ಮಾಡ ಬೇಕು ಇನ್ನು ಲೇಬರ್ ಕೋರ್ಟಿನಲ್ಲಿ ಬೇಕಾದರೆ ಕನ್ಸಿಲಿಯೇಷನ್ ಏನು ಇದೆ ಅದನ್ನು ಅಲ್ಲಿ ಮಾಡುವಂತಹ ಪ್ರಯತ್ನವನ್ನು ಮಾಡಿ ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ :– ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಇದರ ಬಗ್ಗೆ ಎತ್ತಿರತಕ್ಕಂಥ ವಿಚಾರ ಬಹಳ ಗಂಭೀರವಾಗಿದೆ. ನಾನು ಮಾಹಿತಿಯನ್ನು ತರಿಸಿ ಏನು ಕ್ರಮವನ್ನು ತೆಗೆದುಕೊಳ್ಳಬೇಕೆಂಬುದನ್ನು ಕಾನೂನು ರೀತಿಯಲ್ಲಿ ತೆಗೆದುಕೊಳ್ಳತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ :– ಮಾನ್ಯ ಅಧ್ಯಕ್ಷರೇ, ನಾನು ಕಳೆದ ಸಾರಿ ಕಳಪೆ ಅಕ್ಕಿಯನ್ನು ಪ್ರದರ್ಶನ ಮಾಡಿದ್ದೆ. ಯಾವ ಸೊಸೈಟಿಯವರು ಇಂಥ ಕಳಪೆ ಅಕ್ಕಿಯನ್ನು ನೀಡಿದ್ದಾರೆ ಅಂಥವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ತಾವು ಸಂಬಂಧಪಟ್ಟ ಸಚಿವರಿಗೆ ನಿರ್ದೇಶನ ಕೊಟ್ಟಿದ್ದೀರಿ. ಆದರೆ ಅವರು ಯಾವುದೇ ಹೇಳಿಕೆಯನ್ನು ಕೊಡಲಿಲ್ಲ. ಮಾನ್ಯ ಮಂತ್ರಿಯವರು ಹೇಳಿಕೆಯನ್ನು ನೀಡಬೇಕು.

ಅಧ್ಯಕ್ಷರು :– ಮೊನ್ನೆ ಆಹಾರ ಸಚಿವರಿಗೆ ಒಂದು ಸೂಚನೆಯನ್ನು ಕೊಟ್ಟಿದ್ದೆ. ಕಳಪೆ ಅಕ್ಕಿಯ ಬಗ್ಗೆ ಸಂಬಂಧಪಟ್ಟಂತೆ ಆ ಇನ್ಸ್‌ಪೆಕ್ಟರ್ ಆಂಗಡಿ ಲೈಸೆನ್ಸ್ ಕ್ಯಾನೆಸಲ್ ಮಾಡಿದ್ದಾರೆ. ಆದರೆ ಅಧಿಕಾರಿ ಯಾರಿದ್ದರು. ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ಅಥವಾ ಇಲ್ಲವೆ ಎಂಬುದನ್ನು ಈ ಸದನಕ್ಕೆ ಬಂದು ವಾಪಸ್ಸು ಹೇಳಲಿಲ್ಲ. ಮಾರನೆ ದಿವಸವೇ ಸದನಕ್ಕೆ ಒಂದು ಹೇಳಬೇಕಾಗಿತ್ತು. ಆದುದರಿಂದ ತಾವು ದಯಮಾಡಿ ಸರ್ಕಾರದ ಪರವಾಗಿ ಜವಾಬ್ದಾರಿಯನ್ನು ತೆಗೆದುಕೊಂಡು ಆಹಾರ ಸಚಿವರಿಗೆ ಹೇಳಿ ನಾಳೆ ಬೆಳಿಗ್ಗೆ ಒಂದು ಹೇಳಿಕೆಯನ್ನು ಮಾಡುವುದಕ್ಕೆ ಹೇಳಿ.

ಶ್ರೀ ಸಿದ್ದರಾಮಯ್ಯ :– ಸಂಬಂಧಪಟ್ಟ ಮಂತ್ರಿಯವರಿಗೆ ಹೇಳುತ್ತೇನೆ